( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿಃ09/09/2024

ಅಸಲು ದಾವೆ.ನಂ.38/2016

ಡಿ.ಬ್ಲ್ಯೂಃ 1

( ಮುಂದುವರೆದ ಪಾಟೀ ಸವಾಲುಃ ಶ್ರೀ. ಓ.ಡಿ.ಜಿ. ವಕೀಲರಿಂದ ವಾದಿಯ ಪರವಾಗಿ )

ದಾವಾ ಅನುಸೂಚಿ ಸ್ವತ್ತು ಸೂರ್ಯನಾರಾಯಣವರಿಗೆ ಸೇರಿದ್ದು, ಎಂದರೆ ಸಾಕ್ಷಿಯು ಹೌದು ಎಂದು ನುಡಿದು ಮುಂದುವರೆದು ಸರ್ವೆ ನಂಃ5ರ ದಾವಾ ಸ್ವತ್ತಿನ ಚೆಕ್ಕು ಬಂದಿಯೊಳಗಡೆ ನನಗೆ ಸೇರಿದ 3 ಗುಂಟೆ ಇದೆ ಎಂದು ನುಡಿಯುತ್ತಾರೆ. ನೀವು ವಾದಿಗೆ ಹಾಗೂ ಗ್ರಾಮ ಪಂಚಾಯಿಯವರಿಗೆ ಸ.ನಂಃ5 ರ ಸ್ವತ್ತಿಗೆ ಸಂಬಂಧಪಟ್ಟಂತೆ ನೋಟೀಸ್ ನ್ನು ಕೊಡಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿದು ಅದು ನನಗೆ ಸೇರಬೇಕು ಎಂದು ನೋಟೀಸ್ ನ್ನು ಕೊಡಿಸಿದ್ದೆ ಎಂದು ನುಡಿಯುತ್ತಾರೆ. ಸದರಿ ನೋಟೀಸ್ ನಲ್ಲಿ ಚೆಕ್ಕು ಬಂದಿಯನ್ನು ನಮೂದು ಮಾಡಿಸಿದ್ದೇನೋ ಇಲ್ಲವೋ ಎಂದು ನನಗೆ ನೆನಪಿಲ್ಲ. ಸದರಿ ನೋಟೀಸ್ ಸ.ನಂಃ 5ರ 3 ಗುಂಟೆ ಸ್ವತ್ತಿಗೆ ಚಕ್ಕು ಬಂದಿಯನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ಅದರಲ್ಲಿ ನಮೂದಿಸಲಾಗಿದೆಯೇ ಇಲ್ಲವೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಸ.ನಂಃ5ರ 3 ಗುಂಟೆ ಸ್ವತ್ತಿಗೆ ಸಂಬಂಧಪಟ್ಟಂತೆ ಸದರಿ ಸ್ವತ್ತನ್ನು ಅಳತೆ ಮಾಡುವಂತೆ ಕೋರಿ ತಾಲ್ಲೂಕು ಕಚೇರಿಗೆ ಅರ್ಜಿಯನ್ನು ನೀಡಿರುವುದಿಲ್ಲ. ಕೈ ಪಹಣಿ, ಖಾತೆ, ಹಾಗೂ ಎಲ್ಲಾ ಕಂದಾಯ ದಾಖಲೆಗಳನ್ನು ನನ್ನ ತಂದೆ ಹಾಗೂ ನನ್ನ ಹೆಸರಿನಲ್ಲಿ ಇರುವುದರಿಂದ ಸದರಿ ಸ.ನಂಃ5ರ 3 ಗುಂಟೆ ಜಮೀನು ನನಗೆ ಸೇರಿದ್ದು ಎಂದು ಹೇಳುತ್ತಿದ್ದೇನೆ. ನನಗೆ ಓದಲು ಬರೆಯಲು ಬರುವುದಿಲ್ಲ. ಸ.ನಂಃ5ರಲ್ಲಿರುವ 3 ಗುಂಟೆ ಜಮೀನು ನಾಲೆಗೆ ಮುಳುಗಡೆಯಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ನನ್ನ ತಾತ ಕಾಲದಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ.

ನಾನು ಸರ್ವೆ ಕಚೇರಿಗೆ ಸದರಿ 3 ಗುಂಟೆಯನ್ನು ಗುರುತು ಮಾಡುವಂತೆ ಅರ್ಜಿಯನ್ನು ಸಲ್ಲಿಸದೇ ಇರುವುದರಿಂದ ಸದರಿ 3 ಗುಂಟೆ ಜಾಗ ಎಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿಯ ತಂದೆಗೆ ಬರೆದುಕೊಟ್ಟ ದಾವಾ ಅನುಸೂಚಿ ಸ್ವತ್ತು ಪಂಚಾಯಾಯಿತಿಗೆ ಸೇರಿದ್ದು ಎಂದರೆ ಸಾಕ್ಷಿಯ ಸ್ವಲ್ಪ ಸ್ವತ್ತು ಮಾತ್ರ ಪಂಚಾಯಿತಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಸ.ನಂಃ 5ರಲ್ಲಿರುವ 3 ಗುಂಟೆ ಜಮೀನಿನ ಚೆಕ್ಕು ಬಂದಿಃ ತಿಳಿದಿದೆಯೇ ಎಂದರೆ ಸಾಕ್ಷಿಯು ನನಗೆ ಓದಲು ಬರೆಯಲು ಬಾರದೇ ಇರುವುದರಿಂದ ನನಗೆ ದಿಕ್ಕುಗಳು ತಿಳಿಯುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಅನುಸೂಚಿ ಸ್ವತ್ತು ಗ್ರಾಮ ಪಂಚಾತಯಿತಿಗೆ ಸೇರಿದ ಸ್ವತ್ತು, ಅದು ಯಾವುದೇ ಸರ್ವೆ ನಂಬರ್ ಜಾಗ ಅಲ್ಲ ಎಂದರೆ ಸಾಕ್ಷಿಯು ಸದರಿ ಚೆಕ್ಕು ಬಂದಿಯೊಳಗೆ ಸರ್ವೆ ನಂಬರ್ ಜಾಗವೂ ಸೇರಿಕೊಂಡಿರುತ್ತದೆ ಎಂದು ನುಡಿಯುತ್ತಾರೆ. ಸ.ನಂಃ 5ರಲ್ಲಿ 3 ಗುಂಟೆ ಜಾಗಕ್ಕೆ ಸಂಬಂಧಪಟ್ಟ ಕಂದಾಯು ದಾಖಲೆಗಳನ್ನು ತಾಲ್ಲೂಕು ಕಚೇರಿಯಲ್ಲಿ ಪಡೆದುಕೊಳ್ಳಲಾಗಿದೆ. ಸದರಿ 3 ಗುಂಟೆ ಸ್ವತ್ತಿನ ಖಾತೆಯನ್ನು ನನ್ನ ಹೆಸರಿಗೆ ನಾಡ ಕಚೇರಿಯಲ್ಲಿ ಮಾಡಿಸಿರುತ್ತೇನೆ. ಗ್ರಾಮ ಪಂಚಾಯಿತಿಗೆ ಅರ್ಜಿಯನ್ನು ನೀಡಿ ಸದರಿ ಸ್ವತ್ತಿನ ಖಾತೆಯನ್ನು ಬದಲಾಯಿಸುವಂತೆ ಕೇಳಿರುವುದಿಲ್ಲ. ಸದರಿ 3 ಗುಂಟೆ ಸ್ವತ್ತು ಸರ್ವೆ ನಂಬರ್ ಜಾಗ ಆಗಿರುವುದರಿಂದ ಗ್ರಾಮ ಪಂಚಾಯಿತಿಯಲ್ಲಿ ಖಾತೆ ಮಾಡಿಕೊಡಿಸಿಕೊಳ್ಳಲು ಅವಕಾಶ ಇರುವುದಿಲ್ಲ, ಅದ್ದರಿಂದ ತಾಲ್ಲೂಕು ಕಚೇರಿಯಲ್ಲಿ ಮಾಡಿಸಲಾಗಿದೆ ಎಂದರೆ ಸರಿ.

ನನಗೆ 3 ಗುಂಟೆ ಜಮೀನು ಹೇಗೆ ಬಂದಿರುತ್ತದೆ ಎನ್ನುವುದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ದಾವಾ ಅನುಸೂಚಿ ಸ್ವತ್ತನ್ನು ಆರ್.ಟಿ.ಸೂರ್ಯ ನಾರಾಯಣರವರು ವಾದಿಯ ತಂದೆಗೆ ಮಾರಾಟ ಮಾಡಿರುವುದು ನಿಜ. ಆ ದಿನದಿಂದ ದಾವಾ ಅನುಸೂಚಿ ಸ್ವತ್ತು ವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ಸಾಕಿಯು ಅದು ನಮ್ಮ ಸ್ವಾಧೀನದಲ್ಲಿ ಇದೆಎಂದು ನುಡಿಯುತ್ತಾರೆ. ವಾದಿಯ ವಿರುದ್ಧ ನಾನು ಪೊಲೀಸ್ ಠಾಣೆಗೆದೂರನ್ನು ಕೊಟ್ಟಿದ್ದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹೊಡೆದಾಟದ ಬಗ್ಗೆ ಕೊಟ್ಟಿರುವುದಾಗಿ ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ. ಅರಕಲಗೂಡು.